**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ತೇಜಸ್ವಿನಿಗೌಡ ಇವರು ಶೂನ್ಯವೇಳೆಯಲ್ಲಿ ಮಂಡಿಸಿರುವ ಸೂಚನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ**

*****

**ವಿಷಯ:** ಕೊಡಗಿನ ಶ್ರೀಮಂತ ಸಾಂಸ್ಕೃತಿಕ ಧಾರ್ಮಿಕ ಆಚರಣೆಗಳಾದ ಕಾವೇರಿ ನದಿ ನೀರು ಉಗಮ ತಲಕಾವೇರಿಯ ಸಂಕ್ರಮಣ, ಆಯುಧಗಳನ್ನು ಪೂಜಿಸುವ, ಕೈಲ್ಪೋಳ್ದ್, ಭತ್ತದ ಕೊಯ್ಲಿನ ನಂತರ ಪ್ರಕೃತಿಗೆ ಕೃತಜ್ಞತೆ ಸಲ್ಲಿಸುವ ಪುತ್ತರಿ ಮುಂತಾದ ಹಬ್ಬಗಳಲ್ಲಿ ಸಾವಿರಾರು ಕೊಡವರು ಹಗಲು ಹಾಗೂ ರಾತ್ರಿಯ ಬೆಳದಿಂಗಳಲ್ಲಿ ಹಾಡಿ ನರ್ತಿಸುತ್ತಾರೆ. ಹಾಗೆಯೇ ಇದೇ ರೀತಿಯ ಹಬ್ಬಗಳನ್ನು ಕೊಡಗಿನಾದ್ಯಂತ ನೆಲೆಸಿರುವ ಗೌಡ ಪರಂಪರೆಯ ಸಮಾಜ ಕೂಡಾ ಸುಗ್ಗಿಕಟ್ಟೆ ಎಂಬ ಸಾಂಸ್ಕೃತಿಕ-ಧಾರ್ಮಿಕ ಬಯಲು ಆಲಯಗಳಲ್ಲಿ ಸಾವಿರಾರು ವರ್ಷಗಳಿಂದ ಆಚರಿಸುತ್ತಾ ಬರುತ್ತಿದ್ದಾರೆ. ರಾಜರುಗಳ ಕಾಲದಲ್ಲಿ ಸುರಕ್ಷಿತವಾಗಿದ್ದ ಈ ಮಂದ್ ಹಾಗೂ ಸುಗ್ಗಿಕಟ್ಟೆಗಳು ಪ್ರಸ್ತುತ ಕಾಳಜಿ ಇಲ್ಲದೆ ನಿರ್ಲಕ್ಷಿಸಲ್ಪಟ್ಟಿವೆ. ಈ ಮಂದ್ ಹಾಗೂ ಸುಗ್ಗಿಕಟ್ಟೆಗಳಿಗೆ ಆವರಣ ಗೋಡೆ, ಶಿಲ್ಪಕಲಾ ಪ್ರವೇಶದ್ವಾರ ನಿರ್ಮಿಸುವ ಜೊತೆಗೆ ಅಲ್ಲಿ ಸೇರುವ ಹಿರಿಯರು ಮಕ್ಕಳು, ಮಹಿಳೆಯರು ಹಾಗೂ ಯುವಕರಿಗೆ ಊಟ ಉಪಚಾರ, ಶೌಚಾಲಯ ಹಾಗೂ ನೆರಳಿನಲ್ಲಿ ಕುಳಿತು ಸಾಂಸ್ಕೃತಿಕ ಚಟುವಟಿಕೆ ವೀಕ್ಷಿಸಲು ಸುಸಜ್ಜಿತವಾದ ಮಂದ್ ಸಾಂಸ್ಕೃತಿಕ ಭವನ ಹಾಗೂ ಸುಗ್ಗಿಕಟ್ಟೆ ಸಾಂಸ್ಕೃತಿಕ ಭವನಗಳ ನಿರ್ಮಾಣ ಕಡ್ಡಾಯವಾಗಿ ಆಗಬೇಕಿದೆ. ಹಾಗೆಯೇ ಒತ್ತುವರಿ ತೆರವು ಮಾಡಿ ಕ್ರಮವಹಿಸಬೇಕಿದೆ. ಕೊಡಗಿನಾದ್ಯಂತ ಇರುವ ಎಲ್ಲ ಮಂದ್ ಹಾಗೂ ಸುಗ್ಗಿಕಟ್ಟೆಗಳನ್ನು ಗುರ್ತಿಸಿ ಅಭಿವೃದ್ಧಿಪಡಿಸಲು ಸರ್ಕಾರ ತುರ್ತು ಕ್ರಮವಹಿಸಬೇಕೆಂದು ಆಗ್ರಹಿಸುತ್ತೇನೆ.

**ಉತ್ತರ:** ಕೊಡಗಿನ ಶ್ರೀಮಂತ ಸಾಂಸ್ಕೃತಿಕ ಧಾರ್ಮಿಕ ಕೇಂದ್ರಗಳಾದ "ಮಂದ್" ಮತ್ತು "ಸುಗ್ಗಿಕಟ್ಟೆ" ಇವುಗಳ ಸಂಪೂರ್ಣ ನಿರ್ವಹಣೆಯ ಜವಾಬ್ದಾರಿಯನ್ನು, ಆಯಾ ಊರಿಗೆ ಸಂಬಂಧಿಸಿದ ದೇವಸ್ಥಾನ ಸಮಿತಿಯ ಆಡಳಿತ ಮಂಡಳಿಯವರು ನಿರ್ವಹಿಸುತ್ತಿದ್ದಾರೆ. ಈ ಮಂದ್ ಹಾಗೂ ಸುಗ್ಗಿಕಟ್ಟೆಗಳಿಗೆ ಆವರಣ ಗೋಡೆ, ಶಿಲ್ಪಕಲಾ ಪ್ರವೇಶದ್ವಾರ ನಿರ್ಮಿಸುವ ಜೊತೆಗೆ ಅಲ್ಲಿ ಸೇರುವ ಹಿರಿಯರು ಮಕ್ಕಳು, ಮಹಿಳೆಯರು ಹಾಗೂ ಯುವಕರಿಗೆ ಊಟ ಉಪಚಾರ, ಶೌಚಾಲಯ ಹಾಗೂ ನೆರಳಿನಲ್ಲಿ ಕುಳಿತು ಸಾಂಸ್ಕೃತಿಕ ಚಟುವಟಿಕೆ ವೀಕ್ಷಿಸಲು ಸುಸಜ್ಜಿತವಾದ ಮಂದ್ ಸಾಂಸ್ಕೃತಿಕ ಭವನ ಹಾಗೂ ಸುಗ್ಗಿಕಟ್ಟೆ ಸಾಂಸ್ಕೃತಿಕ ಭವನಗಳ ನಿರ್ಮಾಣ ಕುರಿತು ಜಿಲ್ಲಾಡಳಿತದಿಂದ ಪ್ರಸ್ತಾವನೆಯು ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆಯು ಸ್ವೀಕೃತವಾದಲ್ಲಿ, ಈ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಕಸಂವಾ 59 ಕವಿಸ 2023

**(ಶಿವರಾಜ.ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು